AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಕನ್ನಡ ಶಾಸನಗಳಲ್ಲಿ ರಗಳೆ

**ಡಾ. ಬಸವರಾಜು ಪಿ.**
ಸಹಾಯಕ ಪ್ರಾಧ್ಯಾಪಕರು
ಶ್ರೀ ಸಿದ್ಧಗಂಗಾ ಕಾಲೇಜು, ಬಿ.ಹೆಚ್. ರಸ್ತೆ. ತುಮಕೂರು.

ರಗಳೆ ಎಂಬ ಶಬ್ದವು ಸಂಸ್ಕೃತದಲ್ಲಿ ರಘಟವಾಗಿಯೂ, ತೆಲುಗಿನಲ್ಲಿ ರಗಡವಾಗಿಯೂ ಕಂಡುಬಂದಿದೆ. ಕನ್ನಡ ಸಾಹಿತ್ಯದಲ್ಲಿ ಮೊದಲಿಗೆ ರಗಳೆಯನ್ನು ಕಾವ್ಯಗಳಲ್ಲಿ ಪ್ರಯೋಗಿಸಿದ್ದು ಪಂಪ. ಇವನು ಪ್ರಾಕೃತದಲ್ಲಿ ರೂಢವಾಗಿದ್ದ ಪದ್ಧತಿ ಎಂಬ ಛಂದೋರಚನೆಯ ಪ್ರಭಾವಕ್ಕೆ ಒಳಗಾಗಿ ಪಜ್ಜಟಿಕಾ ಎಂಬ ಛಂದೋಬಂಧದ ಲಯವನ್ನು ಮತ್ತು ಗಣಯೋಜನೆಯನ್ನು ಹೋಲುವ ರಗಳೆಯನ್ನು ಪಂಪಭಾರತದಲ್ಲಿ ಪ್ರಯೋಗಿಸಿದ್ದಾನೆ ಎಂಬುದು ವಿದ್ವಾಂಸರುಗಳ ಅಭಿಪ್ರಾಯವಾಗಿದೆ. ಪಂಪನಿಂದ ಪ್ರಾರಂಭವಾದ ರಗಳೆಯ ಛಂದೋಬಂಧವು ಕನ್ನಡದಲ್ಲಿ ಬೆಳೆದು ಸಾಗಿಬಂದು ಹರಿಹರ, ಶಂಕರದೇವ ಮೊದಲಾದವರಿಂದ ಕಾವ್ಯಗಳು ರಚನೆಯಾದವು. ಪಂಪನ ನಂತರದ ಕಾಲದಲ್ಲಿ ಚಂಪೂಕಾವ್ಯಗಳಲ್ಲಿ ಮತ್ತು ಶಾಸನಗಳಲ್ಲಿ ರಗಳೆ ಬಳಕೆಯಾಗಿದೆ. ಪಂಪನ ಕಾಲಾನಂತರ ಬಂದ ಕನ್ನಡದ ಲಾಕ್ಷಣಿಕನಾದ ನಾಗವರ್ಮನು ತನ್ನ ಛಂದೋಂಬುಧಿಯ ತೃತೀಯಾಧಿಕಾರದಲ್ಲಿ ರಗಳೆಯ ಲಕ್ಷಣವನ್ನು ಕಂದಪದ್ಯದಲ್ಲಿ ನಿರೂಪಿಸಿದ್ದಾನೆ. ರಗಳೆಯ ಲಕ್ಷಣಪದ್ಯಗಳು:

ಗಣನಿಯಮ ವಿಪರ್ಯಾಸದೊ
ಳೆಣೆ ಪದದೊಳ್ ಕೂಡಿ ಮಾತ್ರೆ ಸಮನಾಗೆ ಗುಣಾ
ಗ್ರಣಿಯ ಮತದಿಂದೆ ತಾಳದ
ಗಣನೆಗೊಡಂಬಟ್ಟುದದುವೆ ರಘಟಾಬಂಧಂ।[1]
ಮಂದಾನಿಲ ಲಲಿತೋತ್ಸಹ (ವ)
ಮೆಂದೇ ರಗಳೆಗಳ ನಾಮಮಕ್ಕುಂ ಕ್ರಮದಿಂ
ದೊಂದಕೆ ಪದಿನಾಜೆರ್ಪ
ತ್ತೊಂದರ್ಕಿರ್ಪ್ಪತ್ತು ನಾಲ್ಕು ಮಾತ್ರೆಗಳಬಲೆ॥[2]

ಒಂದನೆಯ ಪದ್ಯದಲ್ಲಿ ರಗಳೆಯ ಚರಣಗಳಲ್ಲಿ ಮಾತ್ರೆಗಳು ಗಣನಿಯಮದಲ್ಲಿನ ವಿಪರ್ಯಾಸಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುತ್ತೇವೆ. ಆದರೆ ಪ್ರತೀ ಚರಣದಲ್ಲಿಯೂ ಮಾತ್ರೆಗಳು ಸಮನಾಗಿರುತ್ತವೆ. ಮುಖ್ಯವಾಗಿ ರಗಳೆಯ ಲಯದಲ್ಲಿ ಒಳ್ಪು ಎದ್ದು ಕಾಣುತ್ತದೆ. ಇದು ತಾಳದ ಗಣನೆಗೆ ಒಡಂಬಡುತ್ತದೆ. ಎರಡನೆ ಪದ್ಯವು ರಗಳೆಯಲ್ಲಿ ಉತ್ಸಾಹ, ಮಂದಾನಿಲ, ಲಲಿತ ಹೆಸರುಗಳನ್ನು ಮತ್ತು ಅವುಗಳ ಮಾತ್ರಾಸಂಖ್ಯೆಗಳನ್ನು ಹೇಳಿದ್ದಾನೆ. ನಾಗವರ್ಮನು ಹೇಳಿರುವಂತೆ ಉತ್ಸಾಹರಗಳೆಯು ಪ್ರತಿಪಾದದಲ್ಲಿ ಮೂರು ಮಾತ್ರೆಯ ನಾಲ್ಕುಗಣಗಳು ಅಥವಾ ಮೂರುಮಾತ್ರೆಯ ಮೂರುಗಣಗಳು ಬಂದು ಕೊನೆಯಲ್ಲಿ ಒಂದು ಗುರು ಉಳಿಯುತ್ತದೆ. ಇವನ ಹೇಳಿಕೆಯ ಪ್ರಕಾರ ಎರಡು ಸಾಲುಗಳಿಗೆ ಒಂದು ಸಾಲು ಎಂದು ಪರಿಭಾವಿಸಿ ಇಪ್ಪತ್ನಾಲ್ಕು ಮಾತ್ರೆಗಳೆಂದಿರಬಹುದು. ನಂತರ ಮಂದಾನಿಲ ರಗಳೆಯ ಪ್ರತಿಚರಣದಲ್ಲಿಯೂ ನಾಲ್ಕು ಮಾತ್ರೆಯ ನಾಲ್ಕು ಗಣಗಳು ಬರುತ್ತವೆ. ಅಂದರೆ ಪ್ರತೀ ಚರಣದಲ್ಲಿ ಹದಿನಾರು ಮಾತ್ರೆಗಳಿರುತ್ತವೆ. ಈ ಮಂದಾನಿಲದಲ್ಲಿಯೂ ಎರಡು ಪ್ರಕಾರಗಳನ್ನು ನೋಡುತ್ತೇವೆ. ಮೊದಲನೆಯ ಪ್ರಕಾರದಲ್ಲಿ ಪ್ರತಿಚರಣದಲ್ಲಿ ಹದಿನಾರು ಮಾತ್ರೆಗಳಿದ್ದು ಗಣ ಸಂಯೋಜನೆಯಲ್ಲಿ 3–5, 3–5 ರಂತೆ ಗಣಗಳು ಬರುತ್ತವೆ. ಎರಡನೆಯ ಪ್ರಕಾರದಲ್ಲಿ ಪ್ರತಿ ಚರಣದಲ್ಲಿ 16 ಮಾತ್ರೆಗಳಿದ್ದು, ಗಣಯೋಜನೆಯ 3–5 : 4–4ರಂತೆ ಇರುತ್ತದೆ. ಲಲಿತ ರಗಳೆಯ ಪ್ರತಿ ಚರಣದಲ್ಲಿ ಐದು ಮಾತ್ರೆಯ ನಾಲ್ಕುಗಣಗಳು ಇರುತ್ತವೆ. ಅಂದರೆ ಪ್ರತಿಚರಣದಲ್ಲಿಯೂ 20 ಮಾತ್ರೆಗಳಿರುತ್ತವೆ. ಲಲಿತರಗಳೆಯು ಪ್ರಾಚೀನಕಾಲದಿಂದಲೂ ಕನ್ನಡ ಛಂದಸ್ಸಿನಲ್ಲಿ ಹೆಚ್ಚು ಬಳಕೆಯಾಗಿರುವ ಪ್ರಕಾರವಾಗಿದೆ. ಈ ಮೂರು ರಗಳೆಯಲ್ಲಿ ಪಾದಗಳ ಮಿತಿ ಇರುವುದಿಲ್ಲ. ಕನ್ನಡ ಸಾಹಿತ್ಯದಲ್ಲಿ ಮಾತ್ರ ರಗಳೆ ಛಂದೋಬಂಧದಲ್ಲಿ ಕಾವ್ಯಗಳು ರಚನೆಯಾಗಿರುವುದು ವಿಶೇಷವೂ ಹೌದು. ಈ ಲಾಕ್ಷಣಿಕರು ನಿರೂಪಿಸಿರುವಂತೆ ಕನ್ನಡ ಶಾಸನಗಳಲ್ಲಿ ಪ್ರಯೋಗವಾಗಿರುವ ರಗಳೆಗಳನ್ನು ನೋಡಬಹುದು.

ಬಳ್ಳಾರಿ ಜಿಲ್ಲೆ, ಹಗರಿಬೊಮ್ಮನಹಳ್ಳಿ ತಾಲೂಕಿನ ಕೋಗಳಿ ಊರಿನ ಬಸದಿಯ ಎದುರುಗಡೆಯ ಶಾಸನವು ಕ್ರಿ.ಶ. 1055 ರಲ್ಲಿ ರಚಿತವಾಗಿದೆ. ಈ ಶಾಸನದಲ್ಲಿ 42 ಪಾದಗಳ ರಗಳೆ ಇದೆ. ಇದು ಕನ್ನಡ ಶಾಸನಗಳಲ್ಲಿ ದೊರೆತಿರುವ ಮೊದಲ ರಗಳೆಯಾಗಿದೆ. ಈ ಶಾಸನವು ಕೋಗಳಿಯ ಜೈನಮುನಿ ಇಂದ್ರಕೀರ್ತಿಯ ಪ್ರಶಸ್ತಿಯನ್ನು ಹೇಳುತ್ತದೆ. ಶಾಸನದ ರಗಳೆಯ ಭಾಗವು ಇಂದ್ರಕೀರ್ತಿಮುನಿಯ ಗುಣಗಣಗಳನ್ನು ವಂದಿಮಾಗಧರಂತೆ ಸ್ತುತಿಸಲಾಗಿದೆ. ಶಾಸನದ ಪದ್ಯಭಾಗ ಹೀಗಿದೆ:

ಶ್ರೀಮದರುಹಚ್ಚರಣ ಸರಸಿರುಹಭೃಂಗನಂ
ಭೂಮಿಕೀರ್ತಿಸೆ ನೆಗಳ್ದ ಗುಣಗಣೋತ್ತುಂಗನಂ ।
ಮನುಚರಿತ ನಿರತನಂ ಗುರುಚರಣ ಭಕ್ತನಂ
ವಿನಮಿತಜಗಜ್ಜನಂ ಧರ್ಮ್ಮಾನುರಕ್ತನಂ ।
ಪರಹಿತದಿಳೀಪನಂ ನೃಗಭೂಪಚರಿತನಂ
ಸುರುಚಿರ ಯಶೋಧರನನಕಳಂಕ ಚರಿತನಂ ।
ಪಣ್ಡಿತ ಮುಖಾಂಬುರುಹ(ಷ)ಣ್ಡ ಮಾರ್ತಣ್ಡನಂ
ಕೊಣ್ಡಕುನ್ದಾನ್ವಯ ಸಮೂಹ ಮುಖಮಣ್ಡನಂ ।
ದೇಸೀಯ ಗಣ ಕುಮುದವನ (ಸ)ರಚ್ಚಂದ್ರನಂ
ಭಾಸುರಗುಣಾಢ್ಯನಂ ಕೋಕಳಿಪುರೀನ್ದ್ರನಂ ।
ತ್ರೈಲೋಕ್ಯಮಲ್ಲ ಸದಸರಸಿ ಕಳಹಂಸನಂ
ಸರ್ವ್ವತೋಭದ್ರ ಜಿನ(ಗೃ)ಹ ಸಮುದ್ಧರಣನಂ ।
ಸರ್ವ್ವಶಾಸ್ತ್ರಜ್ಞನಂ ವಿಕಳಜನ ಶರಣನಂ ।

ಶಿಷ್ಟ ಸುರಭೂಜನಂ ಕವಿಕುಮುದರಾಜನಂ
ಇಷ್ಟ ಸಂತುಷ್ಟನಂ ಖರಕಿರಣತೇಜನಂ ।
ದಶಧರ್ಮ್ಮ ಕುಶಳನಂ ಮೇರುಗಿರಿಧೈರ್ಯ್ಯನಂ
ಶಶಿ ವಿಶದಕೀರ್ತ್ತಿಯಂ ದಾನತಾತ್ಪರ್ಯ್ಯನಂ ।
ವಿನಯ ರತ್ನಾಕರಂ ಕವಿಜನಾಚಾರ್ಯ್ಯನಂ
ಜಿನಧರ್ಮ್ಮ ದೀಪಕನಧಿಕ ಭುಜವೀರ್ಯ್ಯನಂ ।
ತ್ರೈಳೋಕ್ಯಮಲ್ಲೇನ್ದ್ರ ಕೀರ್ತ್ತಿಹರಿಮೂರ್ತ್ತಿಯಂ
ಭೂಲೋಕ ವಿಖ್ಯಾತತರ ಯಶೋವರ್ತ್ತಿಯಂ ।
ಭವನಬ್ಬ ಭವನಬ್ಬಜತರರ್ಗ್ಗೆ ಬಣ್ಣಿಸಲ್
ಅವರ್ಗ್ಗರಿದು ಮಾನವರ್ನ್ನೆಜಿದಪರೆ ಬಣ್ಣಿಸಲ್ ।
ಗುರುತನಗೆ ಮಿಥ್ಯೈಕವಾದಿ ಗಜ ಮೃಗರಾಜ
ರರಿಯರೆನಿಸಿದರಿನ್ದ್ರಣನ್ದಿ ಪಣ್ಡಿತದೇವ ।
ರೆನೆ ವಿನಯನಿಧಿ ವಿಪುಳ ಗುಣ ನಿಳಯನೆನಿಸಿದಂ
ಮನುಮತಮೆ ಮತಮೆನಿಸಿ ಬಹುಮತನುಮೆನಿಸಿದಂ ।
ತ್ಯಾಗದೊಳ್ ಶಿಬಿಗುತ್ತ(ಸಾ)ದೃಶ್ಯಮೆನಿಸಿದಂ
ಭೋಗದೊಳ್ ಸುರಪತಿಗೆ ಮಿಗಿಲೆ ತಾನೆನಿಸದಂ ।
ದಾನದೊಳ್ ಸುರಕರಿಯ ದೊರೆ ಸರಿಸನೆನಿಸಿದಂ
ಕಾನೀನನಂ ತನಗೆ ಹೀನನೆ ದಲೆನಿಸಿದಂ ।
ದರ್ಮ್ಮಾನುರಾಗದೊಳ್ ಧರ್ಮಸುತನೆನಿಸಿದಂ
ನೆರ್ಮ್ಮಂ ಬುಧಂಗೆ ಹಿಮಕರನಂತಿ(ರೆ)ನಿಸಿದಂ ।
ಗುರುಸೇವೆಗಿಡದುದಜೆನಮರಪತಿಯೆನಿಸಿದಂ
ಧರಣೀಧರತ್ವದಿಂ ಮೇರುನಗಮೆನಿಸಿದಂ ।
ವಂದಿ ಬೃನ್ದಾರಕ ಮಯೂರಾಂಬುದಾಗಮಂ
ವಂದಿಜನ ಚೂತವನ ಮುದ ವಸಂತಾಗಮಂ ।
ಕವಿಗಮಕವಾದಿ ವಾಗ್ಮೀನ್ದ್ರ ಕಳ್ಪದ್ರುಮಂ
ಕವಿಕದಂಬಕ ಕೀರ ಫಳಿತ ಚೂತದ್ರುಮಂ ।
ಕೇವಳಮೆ ನೆಗಳ್ದಿನ್ದ್ರಕೀರ್ತ್ತಿ ನೃಪಪೂಜಿತಂ
ಕೇವಳಮೆ ಸಕಳಗುಣಗಣ ಯಶೋರಾಜಿತಂ॥[3]

ಈ ಶಾಸನಪದ್ಯದ ಪ್ರಾರಂಭದಲ್ಲಿ 'ತೋಮರರಗಳೆ' ಎಂದು ಶಾಸನಕವಿಯು ಸೂಚಿಸಿದ್ದಾನೆ. ಆದರೆ ಪದ್ಯವು ಲಲಿತರಗಳೆಯ ಲಕ್ಷಣಗಳನ್ನು ಪಡೆದಿದೆ. ತೋಮರರಗಳೆ ಎಂದು ಇತರ ಶಾಸನಗಳಲ್ಲಾಗಲಿ ಸಾಹಿತ್ಯ ಕೃತಿಗಳಲ್ಲಾಗಲಿ ಎಲ್ಲೂ ಕಂಡುಬಂದಿರುವುದಿಲ್ಲ. ಪಂಪ ಮೊದಲಾದವರು ಮಟ್ಟರಗಳೆ, ತ್ವರಿತರಗಳೆ, ಪದ್ದಳಿ, ಪಡ್ಡಳಿ, ಪದ್ಧತಿಕೆ ಎಂದೆಲ್ಲಾ ಹೆಸರಿಸಿದ್ದಾರೆ. ತೋಮರ ಎಂಬ ಪದಕ್ಕೆ 5 ಎಂಬ ಸಂಕೇತವಿರುವುದರಿಂದ 5 ಮಾತ್ರೆಯ ಗಣದಲ್ಲಿ ಮುಂದುವರೆಯುವ ಲಲಿತ ರಗಳೆಯನ್ನು ತೋಮರರಗಳೆ ಎಂದು ಕರೆದಂತೆ ತೋರುವುದು" ಎಂದು ಎಂ. ಎಂ. ಕಲಬುರ್ಗಿಯವರು ಅಭಿಪ್ರಾಯಪಡುತ್ತಾರೆ. ತೋಮರ ಎನ್ನುವುದು ಯುದ್ಧದಲ್ಲಿ ಬಳಸುತ್ತಿದ್ದ ಐದು ಹಲ್ಲುಗಳಿದ್ದ ಒಂದು ಈಟಿಯ ರೂಪದ ಆಯುಧ. ಆದ್ದರಿಂದ ತೋಮರ ಪಂಚಮಾತ್ರಾಗಣವನ್ನು ಸೂಚಿಸುತ್ತದೆ. ಹಾಗಾಗಿ ತೋಮರ ವಿನ್ಯಾಸವನ್ನು ಪಡೆದಿರುವ ರಗಳೆಗೆ ತೋಮರರಗಳೆ ಎಂಬ ಹೆಸರು ಉಚಿತವಾಗಿದೆ ಎಂದು ಡಾ. ಡಿ. ಎಲ್. ನರಸಿಂಹಾಚಾರ್ಯರ ಅಭಿಪ್ರಾಯವಾಗಿದೆ. ಈ ವಿಚಾರಕ್ಕೆ ಕೆಲವು ವಿದ್ವಾಂಸರು ಸಹಮತ ನೀಡಿರುತ್ತಾರೆ. ಹಾಗೆಯೇ ಹಿಂದಿನ ಕನ್ನಡ ಕವಿಗಳಾಗಲಿ, ಶಾಸನಕವಿಗಳಾಗಲಿ ಈ ಛಂದೋ ಲಕ್ಷಣಗಳನ್ನುಳ್ಳ ರಗಳೆಯನ್ನು ಲಲಿತರಗಳೆ ಎಂದೂ ಹೆಸರಿಸಿಲ್ಲ. ಆದರೆ ನಾಗವರ್ಮನ ಛಂದೋಂಬುಧಿಯಲ್ಲಿ ರಗಳೆಯ ಲಕ್ಷಣ ಪದ್ಯದ ನಂತರದ ಪದ್ಯದಲ್ಲಿ "ಮಂದಾನಿಲ ಲಲಿತೋತ್ಸಹವಮೆಂದೇ ರಗಳೆಗಳ ನಾಮಮಕ್ಕುಂ" ಎಂದು ಬಳಕೆಯಾಗಿದೆ. ಈ ಪದ್ಯವು ಪಾಠಾಂತರಗಳ ಕಾರಣದಿಂದ ಹೀಗಾಗಿರಬಹುದೆಂಬ ಅಭಿಪ್ರಾಯವೂ ಇದೆ. ಲಲಿತರಗಳೆ ಎಂಬ ಹೆಸರು ಹರಿಹರನ ಕಾಲಾವಧಿಯಿಂದ ಹೆಚ್ಚು ಪ್ರಚಲಿತವಾಗಿತ್ತೆಂದು ಕೆಲವರ ಅಭಿಪ್ರಾಯ. ಪಂಚಮಾತ್ರಾಗಣದ ಲಯವಿರುವ ರಗಳೆಯನ್ನು ತೋಮರರಗಳೆ ಎಂದು ಕರೆಯುವುದು ಸೂಕ್ತವೆಂದು ಡಾ. ಕೈ. ರಾ. ಗಣೇಶರು ಹೇಳುತ್ತಾರೆ. ಈ ಎಲ್ಲಾ ವಿದ್ವಾಂಸರು ಹೇಳುವಂತೆ ಈ ಶಾಸನಪದ್ಯವು ಮಾತ್ರಾಛಂದಸ್ಸಿನ ರಗಳೆಯಾಗಿದ್ದು, ಪ್ರತೀ ಚರಣದಲ್ಲಿ 5 ಮಾತ್ರೆಗಳ ನಾಲ್ಕುಗಣಗಳಿಂದ ಕೂಡಿರುತ್ತದೆ. ಪ್ರತೀ ಚರಣಗಳಿಗೆ ಆದಿ–ಅಂತ್ಯ ಪ್ರಾಸಗಳು ಬಂದಿವೆ. ಆದರೆ ಕೆಲವು ಕಡೆಯಲ್ಲಿ ಪ್ರಾಸ ವೈಚಿತ್ರ್ಯ ಕಂಡುಬಂದಿದೆ. ಹಾಗೆಯೇ ಕೆಲವು ಕಡೆಗಳಲ್ಲಿ ಯಮಕಾನುಪ್ರಾಸವನ್ನೂ ಕಾಣಬಹುದು. ಪದ್ಯವು ರಾಗ–ತಾಳ–ಲಯಗಳೊಂದಿಗೆ ಸುಲಲಿತವಾಗಿ ಹಾಡಿನಲ್ಲಿ ಸಾಗುತ್ತದೆ. ಸಾಮಾನ್ಯವಾಗಿ ಎಲ್ಲರೂ ಈ ಛಂದೋಲಕ್ಷಣವುಳ್ಳ ರಗಳೆಯನ್ನು ಲಲಿತರಗಳೆ ಎಂದು ಗುರುತಿಸಿದ್ದಾರೆ. ಮುಖ್ಯವಾಗಿ ಪ್ರಚಲಿತವಾಗಿರುವ ಲಲಿತರಗಳೆಯ ಎಲ್ಲಾ ಲಕ್ಷಣಗಳು ಈ ಶಾಸನಪದ್ಯದಲ್ಲಿ ಕಂಡುಬಂದಿರುವುದರಿಂದ ಇದನ್ನು ಲಲಿತರಗಳೆ ಎಂದು ಗುರುತಿಸಬಹುದಾಗಿದೆ.

ಬಳ್ಳಾರಿ ಜಿಲ್ಲೆಯ ಕುರುಗೋಡು ಗ್ರಾಮದ ಕಲ್ಲೇಶ್ವರ ದೇವಾಲಯದ ಮುಂದಿನ ಮಂಟಪದ ದಕ್ಷಿಣಕ್ಕಿರುವ ಶಾಸನವು ಕ್ರಿ.ಶ. 1176 ರಲ್ಲಿ ರಚಿತವಾದ ಒಂದು ದಾನಶಾಸನ. ಕಳಚೂರಿ ರಾಜ ಸೋವಿದೇವನ ಆಳಿಕೆಯ ಕಾಲದಲ್ಲಿ ಕುರುಗೋಡಿನ ಮುಂಮ್ಮರಿದಂಡರಲ್ಲಿ ಒಬ್ಬನಾದ ಕಲ್ಲಿಸೆಟ್ಟಿ ಸ್ಥಾಪಿಸಿದ ಕಲಿದೇವರಿಗೆ, ಸಿಂದವಂಶದ ರಾಚಮಲ್ಲನು ಭೂಮಿದಾನ ಮಾಡಿದಂತೆ ಶಾಸನ ಹೇಳಿದೆ. ಈ ಶಾಸನಪದ್ಯವು ಲಲಿತರಗಳೆಯಲ್ಲಿದ್ದು ಮುಂಮ್ಮರಿದಂಡಗಳ ವ್ಯಕ್ತಿತ್ವವನ್ನು, ಗುಣಗಳನ್ನು ರಮ್ಯವಾಗಿ ಬಣ್ಣಿಸಿರುವ ಶಾಸನಪದ್ಯವು ಹೀಗಿದೆ:

ಸ್ವಸ್ತಿಗವಜೇಶ ಪದಪದ್ಮಷಟ್ಚರಣರುಂ
ವಿಸ್ತೀರ್ಣ ವಸ್ತುಗುಣ ವಿನಿಹಿತಾಚರಣರುಂ ।
ಸಂಚಿತ ಸಮಸ್ತ ಧರ್ಮೈಕನಿಸ್ತರ(ಗು)ಣರುಂ
ನವರತ್ನ ವಾಹನ ಪರೀಕ್ಷಾನವದ್ಯರುಂ ।
ಶರಣೆಂದು ಕಂಡರಂ ಕರುಣದಿಂಕಾವರುಂ
ಬಿರುದಿಂಗೆ ಬೀಗುವರ ಹರಣವಂ ಸೋವರುಂ ।
ತೋಟಿಯೆಂದಡೆ ಕೋಟಿಲಾಭವೆಂದುಲಿವರುಂ

ಆಟಂದಬವರಕ್ಕೆ ನಾಟಕಂ ನಲಿವರುಂ ।
ಅಯ್ಯಾವೊಳೆಯ ತಳದಿನಿದುವೆರ್ಗ್ಗಿಜಿದೆನಿಪ
ರಯ್ಯ ಮಾದ್ವಾರಾವತೀಪುರಕ್ಕೆ ಕುಱುವೆನಿಪ ।
ಕುಱುಗೋಡತಳದೊಳಗೆತಳರದಯ್ನೂರ್ವ್ವರುಂ
ನೆಱೆನೋರ್ಪ್ಪಡವರೊಳಗೆ ಪಗೆಗಂಜರೊರ್ವರುಂ॥[4]

"ಒಳಿತಾಗಲಿ ಗವರೇಶ್ವರನ ಪಾದಪದ್ಮದಲ್ಲಿ ತುಂಬಿಯಂತಿರುವರು. ವಿಸ್ತೀರ್ಣವಾದ ವಸ್ತುಗುಣವನ್ನು ಕಂಡುಕೊಳ್ಳುವ ಸ್ವಭಾವದವರು, ಐದು ನೂರು ವೀರಶಾಸನ ಗುಣಗಳನ್ನು ಉದ್ಧರಿಸುವರು, ಸಕಲಧರ್ಮವನ್ನು ಸಹಿಸುವರು, ವ್ಯವಹಾರದಲ್ಲಿ ನಯ, ವಿನಯ, ವಿಜ್ಞಾನಗಳನ್ನು ಬಲ್ಲವರು, ನವರತ್ನ ವಾಹನ ಪರೀಕ್ಷೆಯನ್ನು ಅರಿತವರು, ಶರಣೆಂದು ಬಂದವರನ್ನು ಕರುಣೆಯಿಂದ ಕಾಯುವವರು, ಹೊಗಳಿಕೆಗೆ ಬೀಗುವವರ ಜೀವವನ್ನೇ ತೆಗೆಯುವರು, ಜಗಳವೆಂದರೆ ಕೋಟಿಲಾಭವೆಂದು ಹೇಳುವರು, ಯುದ್ಧವನ್ನು ಆಟದ ಒಂದು ರೀತಿಯೆಂದೇ ಭಾವಿಸಿ ನಾಟಕದಂತೆ ನಲಿಯುವರು" ಎಂದು ವರ್ಣನೆಯಾಗಿದೆ. ಈ ಶಾಸನಪದ್ಯವು ಲಾಕ್ಷಣಿಕರು ನಿರೂಪಿಸಿರುವ ಲಲಿತ ರಗಳೆಯ ಲಕ್ಷಣಗಳನ್ನು ಹೊಂದಿದೆ. ಪ್ರತಿ ಎರಡೆರಡು ಚರಣಗಳಿಗೆ ಪ್ರಾಸಗಳು ನಿಯತವಾಗಿ ಬಳಕೆಯಾಗಿವೆ. ಪ್ರತಿ ಚರಣದಲ್ಲಿ 5 ಮಾತ್ರೆಯ ನಾಲ್ಕುಗಣಗಳು ಬಂದಿವೆ. ಹಾಗೂ ಈ ಶಾಸನಪದ್ಯವು 14 ಪಾದಗಳಿಂದ ಕೂಡಿದೆ.

ಬಳ್ಳಾರಿ ಜಿಲ್ಲೆಯ ಕುರುಗೋಡು ಗ್ರಾಮದ ಬಸವೇಶ್ವರದೇವಾಲಯದ ದಕ್ಷಿಣಕ್ಕೆ ಇರಿಸಿರುವ ಶಾಸನವು ಕ್ರಿ.ಶ. 1177 ರಲ್ಲಿ ರಚಿತವಾಗಿದೆ. ಇದು ಸಿಂಧವಂಶದ ರಾಚಮಲ್ಲನ ಕಾಲಕ್ಕೆ ಸೇರಿದ್ದು. ಇದು ಒಂದು ದಾನಶಾಸನವಾಗಿದೆ. ಶಾಸನವು ಬಣಜಿಗರಾದ ಮುಮ್ಮರಿದಂಡರನ್ನು ವರ್ಣಿಸಿದೆ. ಈ ಶಾಸನದಲ್ಲಿ ಮಾತ್ರಾಛಂದದಲ್ಲಿರುವ ಎರಡು ರಗಳೆಗಳನ್ನು ನೋಡಬಹುದು. ಮೊದಲಿಗೆ ಶಾಸನದ 27ನೆಯ ಸಾಲಿನಿಂದ 29ನೆಯ ಸಾಲಿನಲ್ಲಿ 8 ಚರಣಗಳ ಒಂದು ರಗಳೆಯನ್ನು ಕಾಣಬಹುದು. ಇಲ್ಲಿ ಶಾಸನಕಾರ ರಗಳೆ ಎಂದು ಸೂಚಿಸದಿದ್ದರೂ ಲಲಿತರಗಳೆಯ ಛಂದೋಲಕ್ಷಣಗಳನ್ನು ಹೊಂದಿರುವ ಪದ್ಯವು ಕಂಡುಬರುತ್ತದೆ. ಶಾಸನಪದ್ಯವು ಹೀಗಿದೆ :

ಉದ್ವೃತ್ತ ಮಂಡಲಿಕತಾರಕ ಷಡಾನನಂ
ವಿದ್ವಿಷ್ಟಬಿದ್ಧಂಸ ಸಬಳ ಪಂಚಾನನಂ ।
ಅಸದಳಂಕಾರಾ(ಂ) ನ್ಯನಾರೀ ವಿದೂರಂ
ಅಸದೃಶ ಮಹಾಘೋರಸಂಗ್ರಾಮಧೀರಂ ।
ವಿಪುಲ ವಿದ್ವದ್ವಿನುತ ಸಾಹಸೋತ್ತುಂಗಂ
ನೃಪತಿಳಕ ಸಾಯಿದೇವನ ವೀರಸಿಂಗಂ ।
ಕಲಿದೇವದಿಬ್ಯ ಪದ ಪಂಕಜಾರಾಧಕಂ
ಬಲವದರಿ ಭೂಪಾಳಕುಳ ಸೈನ್ಯಸಾಧಕಂ॥[5]

ಶಾಸನಪದ್ಯವು ಲಾಕ್ಷಣಿಕರು ನಿರೂಪಿಸಿರುವ ಲಲಿತರಗಳೆಯ ನಿಯಮದಿಂದ ಕೂಡಿದೆ. ಪ್ರತಿ ಚರಣದಲ್ಲಿ 5 ಮಾತ್ರೆಯ ನಾಲ್ಕು ಗಣಗಳಿವೆ. ಎರಡೆರಡು ಸಾಲುಗಳಿಗೆ ಆದಿ-ಅಂತ್ಯಪ್ರಾಸಗಳು ನಿಯತವಾಗಿ ಬಳಕೆಯಾಗಿವೆ. ಪ್ರತೀ ಪಾದದಲ್ಲಿ ಇಪ್ಪತ್ತು ಮಾತ್ರೆಗಳಿವೆ. ಆದರೆ ಅಕ್ಷರ ಸಂಖ್ಯೆಯಲ್ಲಿ ವ್ಯತ್ಯಯ ಕಂಡುಬರುವುದು ಸಾಮಾನ್ಯವಾಗಿದೆ. ಇದೇ ಶಾಸನದ 33ನೆಯ ಸಾಲಿನಲ್ಲಿ ರಗಳೆ ಎಂದು ಸೂಚಿತವಾಗಿದ್ದು ಅಲ್ಲಿಂದ ಮುಂದೆ 39ನೆಯ ಸಾಲಿನವರೆಗೆ ಲಲಿತರಗಳೆ ಬಳಕೆಯಾಗಿದೆ. ಪದ್ಯವನ್ನು ಗುರುತಿಸಲು ಪ್ರತಿ ಸಾಲಿನ ಅಂತರದಲ್ಲಿ ಗೆರೆ ಎಳೆಯಲಾಗಿದೆ. ಮುಮ್ಮರಿ ದಂಡಗಳನ್ನು ವರ್ಣಿಸಿರುವ ಶಾಸನಪದ್ಯವನ್ನು ಇಲ್ಲಿ ಕಾಣಬಹುದು:

ಶ್ರೀ ಮದಾರ್ಯ್ಯನಾಮಪುರ ಮುಖ್ಯ ಭೂತರೆನಿ
ಪಯ್ನೂರ್ವ್ವರಿಂದೊದವಿದನ್ವಯಾಯಾತರುಂ ।
ಭಗವತೀ ಲಬ್ಧವರದಾನ ಪ್ರಸಾದರುಂ
ಅಗಣಿತ ಮಹಾಸೌಖ್ಯಸಂ ಪತ್ಪ್ರಮೋದರುಂ ।
ಚಕ್ರಧರ ದತ್ತ ಚಕ್ರಧ್ವಜ ವಿರಾಜರುಂ
ಪ್ರಾರ್ತ್ಥಿತಾರ್ತ್ಥಿಪ್ರಕರ ಸುರರಾಜ ಭೂಜರುಂ ।
ಸಾಹಸೋತ್ತುಂಗರುಂ ಹರಪಾದಭೃಂಗರುಂ
ಚಲದಙ್ಕರಾಮರುಂ ಬಲಗರ್ವ್ವಭೀಮರುಂ ।
ಅಸಹಾಯಸೌರ್ಯ್ಯರುಂ ಮೇರುಗಿರಿಧೈರ್ಯ್ಯರುಂ
ಏಕೈಕ ವೀರರುಂ ಲೋಕಯ್ಕ ಸೂರರುಂ ।
ಪರವಧೂದೂರರುಂ ಭುವನ ನಿಸ್ತಾರರುಂ
ಚಲದರ್ತ್ಥಿಗಣ್ಡರುಂ ಸಂಗ್ರಾಮ ಶೌಣ್ಡರುಂ ।
ಅಧಿಕ ಪ್ರಚಣ್ಡರುಂ ನುಡಿದನ್ತೆಗಣ್ಡರುಂ
ಶರಣಾಗತರಕ್ಷಕರ್ದ್ದುಷ್ಟುಜನ ಶಿಕ್ಷಕರು(ಂ) ।
ಸಿಡಿಲ ನಡಿಗಿಸುವರ್ತ್ತೋಡರ್ದರಂ ಕೊಲಿಸುವರ್
ಕೀರ್ತಿ ನಾರಾಯಣರುಉದ್ಯಮ ಪರಾಯಣ ।
ದ್ದುಷ್ಟರ್ಗ್ಗೆ ದುಷ್ಟರ್ ಸಿಷ್ಟರ್ಗೆ ಸಿಷ್ಟರುಂ ।
ಗವಱೇಶ ದಿಬ್ಯಚರಣಾಂಬುಜಾರಾಧಕ
ಭರ್ಬ್ಬವನದೊಳು ದುಷ್ಟರಿಪು ಕುಳಸೈನ್ಯಸಾಧಕರ್ ।
ಅಭಿನವ ಧ್ವಾರಾವತೀಪುರಮಿದೆನಿಸಿರ್ದ್ದ
ಕುಱುಗೋಡ ಪಟ್ಟಣ ಸ್ವಾಮಿಗಳ್ಕೊಡಿಟ್ಟು॥[6]

ಶಾಸನಪದ್ಯವು ಲಲಿತರಗಳೆಯ ಲಕ್ಷಣಗಳಿಂದ ಕೂಡಿದೆ. ಪ್ರತಿ ಚರಣವು 20 ಮಾತ್ರೆಗಳಿಂದ ಕೂಡಿ, 5 ಮಾತ್ರೆಗಳ 4 ಗಣಗಳಿವೆ. ಆದರೆ ಇದೇ ಶಾಸನದ ಹಿಂದಿನ ಪದ್ಯದಂತೆ ಪ್ರಾಸವು ವ್ಯವಸ್ಥಿತವಾಗಿ ಬಳಕೆಯಾಗಿಲ್ಲ. ಕೆಲವು ಕಡೆಯಲ್ಲಿ ಮಧ್ಯಪ್ರಾಸ ಬಳಕೆ ಕಂಡುಬರುತ್ತದೆ. ಹಾಗೆಯೇ ಅಂತ್ಯಪ್ರಾಸಗಳು ನಿಯತವಾಗಿ ಬಳಕೆಯಾದರೂ ಕೊನೆಯಲ್ಲಿ ಹದಗೆಟ್ಟಿದೆ.

ಕೊಪ್ಪಳದ ಮಿಟ್ಟಕೇರಿ ಓಣಿಯಲ್ಲಿನ ಜಾಮಿಯಾ ಮಸೀದಿಯ ಮಾಡಿಗೆ ಸೇರಿಸಿರುವ ಶಾಸನದ ಕಾಲವನ್ನು ಲಿಪಿಯ ಆಧಾರದ ಮೇಲೆ ಕ್ರಿ.ಶ. 11 ನೆಯ ಶತಮಾನವೆಂದು ಸಂಪಾದಕರು ಗುರುತಿಸಿದ್ದಾರೆ. ಶಾಸನದಲ್ಲಿ ಕದಂಬ ವಂಶದ ಬಾಚರಸನ ವರ್ಣನೆ ಬರುತ್ತದೆ. ಇವನು ತೈಲ ಚಕ್ರವರ್ತಿಗೆ ಜಯವನ್ನು ತಂದಿತ್ತವನು ಎಂದಿದೆ. ಇವನು ಅಜವರ್ಮನ ಮಗನೆಂದೂ, ಇವನಿಗೆ ದ್ರೋಣ ಮತ್ತು ಪಂಪನೆಂಬ ಮಕ್ಕಳಿದ್ದರೆಂದು ತಿಳಿಸುತ್ತದೆ. ಆದರೆ ಶಾಸನ ಹೆಚ್ಚು ತ್ರುಟಿತವಾಗಿರುವುದರಿಂದ ವಿವರಗಳು ಸ್ಪಷ್ಟವಾಗಿ ದೊರೆಯುವುದಿಲ್ಲ. 32 ಸಾಲುಗಳಿರುವ ಶಾಸನದಲ್ಲಿ ಕೊನೆಯ ಮೂರು ಸಾಲುಗಳಲ್ಲಿ ಲಲಿತರಗಳೆ ಬಳಕೆಯಾಗಿದೆ. ಶಾಸನದ 30ನೆಯ ಸಾಲಿನಲ್ಲಿ ॥ಲಲಿತರಗಳೆ॥ ಎಂದು ಸೂಚಿಸಿದೆ. ಆದರೆ ಶಾಸನದ ಈ ಭಾಗವು ಹೆಚ್ಚು ತ್ರುಟಿತವಾಗಿರುವುದರಿಂದ ಪದ್ಯ ಭಾಗವನ್ನು ಪರಿಷ್ಕರಿಸಲು ಸಾಧ್ಯವಾಗುತ್ತಿಲ್ಲ ಮತ್ತು ರಗಳೆಯ ಛಂದೋಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಲು ಆಗುವುದಿಲ್ಲ. ಶಾಸನ ಪಾಠ ಹೀಗಿದೆ :

" 30 __________ ॥ಲಲಿತರ(ಗಳೆ)॥ ಪ __________ ಳ _____ಂನ್ನಳವೊ ನಿನ್ನಳವೊ ಪೆಂಪನೊಳಕೊಣ್ಡಳೀ___

" 31 __________ ಮುಂನಯ ___ ಮಮಾನುಅನ್ತೊದವಿಪು _____

" 33 ______ ಮುಂ ______ ಪಯೋದನೆ ____ ದ ____ದರಿಷಡ್ವರ್ಗಮರಿವರ್ಗ್ಗದೊಡನೊಡನೇ _____॥[7]

ಹೀಗೆ ಕನ್ನಡ ಶಾಸನಗಳಲ್ಲಿ ಲಲಿತರಗಳೆಯು ಬಳಕೆಯಾಗಿವೆ. ಕೋಗಳಿಯ ಶಾಸನದಲ್ಲಿ 1, ಕುರುಗೋಡು ಶಾಸನಗಳಲ್ಲಿ 3, ಕೊಪ್ಪಳ ಶಾಸನದಲ್ಲಿ 1 ಅಂದರೆ ಒಟ್ಟು 5 ರಗಳೆಗಳು ಕನ್ನಡ ಶಾಸನಗಳಲ್ಲಿ ಈವರೆಗೆ ಸಿಕ್ಕಿವೆ. ಇವೆಲ್ಲ ರಗಳೆಗಳೂ ಲಲಿತರಗಳೆಯ ಛಂದೋಬಂಧದಲ್ಲಿರುವುದು ಸ್ಪಷ್ಟವಾಗಿದೆ. ನಾಲ್ಕು ರಗಳೆಗಳು ನಮಗೆ ದೊರೆತಿರುವುದು ಬಳ್ಳಾರಿ ಜಿಲ್ಲೆಯಲ್ಲಿ. ಅಂದರೆ ಕನ್ನಡದಲ್ಲಿ ರಗಳೆಯ ಕವಿ ಎಂದೇ ಹೆಸರಾದ ಮಹಾಕವಿ ಹರಿಹರನು ಬದುಕಿದ್ದ ಪ್ರದೇಶವಾಗಿತ್ತು. 12ನೆಯ ಶತಮಾನದ ಕೊನೆಯ ಕಾಲದವನಾದ ಹರಿಹರನು ಹಂಪೆಯಲ್ಲಿದ್ದು ತನ್ನ ಕಥನ ಕಾವ್ಯಕ್ಕೆ ಹೊಸಬಗೆಯ ಛಂದೋರೂಪವಾದ ರಗಳೆಯನ್ನು ಉಪಯೋಗಿಸಿದನು. ಹಾಗೆಯೇ ಹೊಸಪ್ರಕಾರದ ಪ್ರೌಢಿಮೆಯನ್ನು ಪರಿಚಯಿಸಿದನು. ಅಲ್ಲಿನ ಜನಪ್ರಿಯ ಛಂದೋಬಂಧವಾದ ಪದ್ಯವೆಂದರೆ ಅದು ರಗಳೆಯಾಗಿತ್ತು. ಇವನ ಪ್ರಭಾವದಿಂದ ಶಾಸನಕವಿಗಳು ತಮ್ಮ ಶಾಸನಗಳಲ್ಲಿ ರಗಳೆಯನ್ನು ಬಳಸಿರಬಹುದು. ಈ ಐದು ರಗಳೆಗಳು ಕ್ರಿ.ಶ. 1055 ರಿಂದ 1177 ರ ವರೆಗೆ ಸುಮಾರು 125 ವರ್ಷಗಳ ಅವಧಿಯಲ್ಲಿ ರಚಿತವಾಗಿವೆ. ಆದರೆ ಮುಂದಿನ ಶಾಸನಗಳಲ್ಲಿ ರಗಳೆಗಳು ಬಳಕೆಯಾಗಿರುವುದು ಕಂಡುಬಂದಿಲ್ಲ. ಅಂದರೆ ಶಾಸನಕವಿಗಳ ಮೇಲೆ ಹರಿಹರನ ಪ್ರಭಾವವಿರುವುದನ್ನು ಕಾಣಬಹುದು. 4 ರಗಳೆಗಳಲ್ಲಿ ಕಂಡುಬರುವ ವರ್ಣನೆಗಳು ಕಾವ್ಯಸೌಂದರ್ಯದಿಂದ ಕೂಡಿವೆ. ಕೋಗಳಿಯ ಶಾಸನದ ರಗಳೆಯು ಇಂದ್ರಕೀರ್ತಿಯ ಪ್ರಶಸ್ತಿ, ಗುಣಗಣಗಳನ್ನು ವಿಶೇಷವಾಗಿ ವರ್ಣಿಸಿದೆ. ಕುರುಗೋಡು ಶಾಸನಗಳಲ್ಲಿನ ರಗಳೆಗಳು ಮುಮ್ಮುರಿದಂಡರನ್ನು ವರ್ಣಿಸಿವೆ. ಅಂದರೆ ರಗಳೆಯು ಭಾವನಾತ್ಮಕ ವಿಚಾರಗಳನ್ನು ವರ್ಣನಾತ್ಮಕವಾಗಿ ಅಭಿವ್ಯಕ್ತಿಸಲು ಉತ್ತಮ ಮಾಧ್ಯಮವಾಗುತ್ತದೆ.

ಮೇಲಿನ ಐದು ರಗಳೆಗಳು ಕನ್ನಡ ಶಾಸನದಲ್ಲಿ ದೊರೆತ ಕನ್ನಡ ಭಾಷೆಯಲ್ಲಿ ರಚಿತವಾಗಿರುವ ರಗಳೆಗಳು ಇವುಗಳನ್ನು ಹೊರತುಪಡಿಸಿ ಸಂಸ್ಕೃತ ಭಾಷೆಯಲ್ಲಿ ಬರೆದಿರುವ ಏಕೈಕ ರಗಳೆಯು ಆಂಧ್ರಪ್ರದೇಶದ ಕೋರಮಿಲ್ಲ ತಾಮ್ರಶಾಸನದಲ್ಲಿ ಇರುವುದನ್ನು ಗುರುತಿಸಲಾಗಿದೆ. ಇದನ್ನು ಬರೆದ ಕವಿ ಭೀಮನಭಟ್ಟ, ಶಾಸನಕಾಲ ಕ್ರಿ.ಶ. 1022 ಆಗಿದ್ದು ಇದನ್ನು ಫ್ಲೀಟ್ ಮೊದಲಿಗೆ ಪ್ರಕಟಿಸಿದರು. ಈ ಶಾಸನದಲ್ಲಿರುವ ರಗಳೆಯನ್ನು ಡಾ. ಪಿ. ಬಿ. ದೇಸಾಯಿಯವರು ಲಲಿತರಗಳೆ ಎಂದು ಸೂಚಿಸಿದರು ಎಂದು ಎಂ. ಎಂ. ಕಲಬುರ್ಗಿಯವರು ಮಾರ್ಗ–2 ರಲ್ಲಿ ಹೇಳಿದ್ದಾರೆ. ಈ ಆರು ರಗಳೆಗಳನ್ನು ಬಿಟ್ಟರೆ ಶಾಸನಗಳಲ್ಲಿ ರಗಳೆಗಳು ಬಳಕೆಯಾಗಿರುವುದು ಕಂಡುಬಂದಿಲ್ಲ.

**ಅಡಿಟಿಪ್ಪಣಿ:**

1. ವೆಂಕಟಾಚಲಶಾಸ್ತ್ರೀ ಟಿ. ವಿ. (ಸಂ) 2007, ಛಂದೋಂಬುಧಿ, ಪುಟ–115.
2. ಸೇಶ ಅಯ್ಯಂಗಾರ್.ಹಚ್ ಮತ್ತು ರಾಮಸ್ವಾಮಿ ಅಯ್ಯಂಗಾರ್ (ಸಂ) 1957, ಛಂದೋಂಬುಧಿ, ಪುಟ–55.
3. ಕ.ವಿ.ವಿ.ಶಾ.ಸಂಪುಟ–01, ಬಳ್ಳಾರಿ(ಜಿ), ಹಗರಿಬೊಮ್ಮನಹಳ್ಳಿ ಶಾ.ಸಂಖ್ಯೆ–15, ಪುಟ–268.
4. ಕ.ವಿ.ವಿ.ಶಾ.ಸಂಪುಟ–01, ಬಳ್ಳಾರಿ(ಜಿ), ಬ. ಶಾ.ಸಂಖ್ಯೆ–7, ಪುಟ–10.
5. ಕ.ವಿ.ವಿ.ಶಾ.ಸಂಪುಟ–01, ಬಳ್ಳಾರಿ(ಜಿ), ಬ. ಶಾ.ಸಂಖ್ಯೆ–8, ಪುಟ–14.
6. ಕ.ವಿ.ವಿ.ಶಾ.ಸಂಪುಟ–01, ಬಳ್ಳಾರಿ(ಜಿ), ಬ. ಶಾ.ಸಂಖ್ಯೆ–7, ಪುಟ–15.
7. ಕ.ವಿ.ವಿ.ಶಾ.ಸಂಪುಟ–2, ಕೊಪ್ಪಳ(ಜಿ), ಕೊ.ಶಾ.ಸಂಖ್ಯೆ–51, ಪುಟ–48.

**ಆಕರಗಳು/ಆಧಾರ ಗ್ರಂಥಗಳು:**

1. ಬಸವರಾಜು ಎಲ್. (ಸಂ), ಕನ್ನಡ ಛಂದಸ್ಸಂಪುಟ, ಪ್ರಕಟಣೆ: ಗೀತಾಬುಕ್ ಹೌಸ್. ಮೈಸೂರು–1. 2012.
2. ಚಿದಾನಂದಮೂರ್ತಿ ಎಂ., ಭಾಷಾವಿಜ್ಞಾನ ಮತ್ತು ಛಂದಸ್ಸು, ಪ್ರಕಟಣೆ: ಸಪ್ನ ಬುಕ್ ಹೌಸ್. ಬೆಂಗಳೂರು. 2002.
3. ಗಣೇಶ್ ಆರ್. (ಸಂ), ದ್ರಾವಿಡಛಂದಸ್ಸು, ಮೂಲ: ಕೀರ್ತಿಶೇಷಕುಕ್ಕಿಲ ಕೃಷ್ಣಭಟ್ಟರು. ಪ್ರಕಟಣೆ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ. ಉಡುಪಿ. 2002.
4. ಕನ್ನಡ ವಿಶ್ವ ವಿದ್ಯಾನಿಲಯ ಶಾಸನ ಸಂಪುಟ–1, ಬಳ್ಳಾರಿ ಜಿಲ್ಲೆ, (ಸಂ) ದೇವರಕೊಂಡಾರೆಡ್ಡಿ. ಪ್ರಕಟಣೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ. 1998.
5. ಕನ್ನಡ ವಿಶ್ವ ವಿದ್ಯಾನಿಲಯ ಶಾಸನ ಸಂಪುಟ–2, ಕೊಪ್ಪಳ ಜಿಲ್ಲೆ, (ಸಂ) ದೇವರಕೊಂಡಾರೆಡ್ಡಿ. ಪ್ರಕಟಣೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ. ವಿದ್ಯಾರಣ್ಯ, 1999.
6. ಸೇಶ ಅಯ್ಯಂಗಾರ್ ಹೆಚ್., ಮತ್ತು ರಾಮಸ್ವಾಮಿ ಅಯ್ಯಂಗಾರ್, (ಸಂ) ಛಂದೋಂಬುಧಿ, ಪ್ರಕಟಣೆ: ಶ್ರೀ ಲಲಿತ ಪ್ರಕಾಶನ, ಮೈಸೂರು, 1967.
7. ವೆಂಕಟಾಚಲ ಶಾಸ್ತ್ರೀ ಟಿ. ವಿ., ಕನ್ನಡ ಛಂದಃಸ್ವರೂಪ, ಪ್ರಕಟಣೆ: ಡಿ.ವಿ.ಕೆ ಮೂರ್ತಿ ಪ್ರಕಾಶನ, ಮೈಸೂರು, 2014.
8. ವೆಂಕಟಾಚಲ ಶಾಸ್ತ್ರೀ ಟಿ. ವಿ., (ಸಂ) ಛಂದೋಂಬುಧಿ, ಪ್ರಕಟಣೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ. ಹಂಪಿ. ವಿದ್ಯಾರಣ್ಯ, 2007.